ನವಸಾಕ್ಷರ ಪುಸ್ತಕ ಮಾಲೆ ೫೨

ಜಾತಕ ಕಥೆಗಳು

ಜೆ. ಶ್ರೀನಿವಾಸ ಮೂರ್ತಿ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ-೫೩

ಜಾತಕ ಕಥೆಗಳು

ಜೆ. ಶ್ರೀನಿವಾಸ ಮೂರ್ತಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

JAATAKA KATHEGALU : By J. SRINIVASMURTHY. Published by The Director of Prasaranga Kannada University, Hampi - 583 211, KARNATAKA.
First Impression 1994, Pp. ii + 26, Rs. 8.00

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ ೮.೦೦

ಮುದ್ರಕರು
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
೩/೩, ಮೊದಲನೆಯ ಮುಖ್ಯರಸ್ತೆ
ಹೊಸ ತರಗುಪೇಟೆ,
ಬೆಂಗಳೂರು-೫೬೦ ೦೦೨.

ಜಾತಕ ಕಥೆಗಳು

ಎರಡೂವರೆ ಸಾವಿರ ವರ್ಷಗಳಿಗೂ ಹಿಂದೆ ಸಿದ್ಧಾರ್ಥ ಹುಟ್ಟಿದ. ಅವನು ಹುಟ್ಟಿದ್ದು ಹಿಮಾಲಯದ ತಪ್ಪಲಲ್ಲಿ. ಕಪಿಲವಸ್ತು ಎಂಬ ಕಡೆ. ರಾಜಕುಮಾರನಾಗಿ ಹುಟ್ಟಿದ ಸಿದ್ಧಾರ್ಥ ಜೀವಿಗಳ ಕಷ್ಟ ನೋಡಿದ. ಅರಮನೆಯಲ್ಲಿ ಸುಖ ಕಾಣದೆ ಸನ್ಯಾಸಿಯಾಗಿ ಅಲೆದಾಡಿದ. ಜೀವಿಗಳ ಕಷ್ಟದ ಕೊನೆ ಹುಡುಕುತ್ತಾ ತಪಸ್ಸು ಮಾಡಿದ. ಎಷ್ಟೋ ವರ್ಷದ ಅಲೆದಾಟ, ಹುಡುಕಾಟ, ತಪಸ್ಸು ಆದ ಮೇಲೆ 'ಬೋಧಿ' ಎಂದರೆ, 'ಜ್ಞಾನ ಪಡೆದ. ಬುದ್ಧನಾದ.

ಗಯಾದಲ್ಲಿ ಬೋಧಿ ಪಡೆದ ಮೇಲೆ ಸಿದ್ಧಾರ್ಥ ಬುದ್ಧನಾಗಿ ಕಾಶಿಯ ಹತ್ತಿರ ಬಂದ. ಹಿಂದೆ ತನ್ನ ಜತೆಗಾರರಾಗಿದ್ದವರಿಗೆ ತಾನು ಕಂಡ ಸತ್ಯವನ್ನು ಉಪದೇಶಿಸಿದ. ಅಂದಿನಿಂದ ಬುದ್ಧ ತಾನು ಕೊನೆ ಉಸಿರು ಎಳೆಯುವವರೆಗೆ ಮಾಡಿದ ಉಪದೇಶದ ಮೊತ್ತವೇ ಬುದ್ಧಧರ್ಮ. ಬುದ್ಧನ ಉಪದೇಶದಿಂದ, ಸನ್ಯಾಸಿಗಳಾಗಿ ಅವನ ಶಿಷ್ಯರಾದವರನ್ನು ಭಿಕ್ಷುಗಳೆನ್ನುತ್ತಾರೆ. ಆ ಭಿಕ್ಷುಗಳ ಗುಂಪೇ 'ಸಂಘ'. ಬುದ್ಧ, ಧರ್ಮ, ಸಂಘಗಳು—ಬೌದ್ಧರು ಮುಖ್ಯವಾಗಿ ಪೂಜಿಸುವ ಮೂರು ವಿಷಯಗಳು.



ಹಿಮಾಲಯದ ತಪ್ಪಲಲ್ಲಿ ಸಿದ್ಧಾರ್ಥ

ಬುದ್ಧನು ಸಂಘಕ್ಕೂ, ಸಾಮಾನ್ಯರಿಗೂ ಮಾಡಿದ ಉಪದೇಶವನ್ನೇ ಬೌದ್ಧರಲ್ಲಿ 'ಧರ್ಮ' ವೆನ್ನುವುದು. ಶೀಲ, ಪ್ರಜ್ಞೆ, ಸಮಾಧಿಗಳು ಅದರ ಮೂರು ಮುಖ್ಯ ಅಂಶಗಳು. ಶೀಲ ಎಂದರೆ ಒಳ್ಳೆಯ ನಡತೆ. ಆದರೆ, ವಿವೇಕವಿಲ್ಲದಿದ್ದರೆ ಒಳ್ಳೆಯತನ ಕೆಲಸಕ್ಕೆ ಬಾರದು. ಸತ್ಯಕ್ಕೂ ಒಳ್ಳೆತನಕ್ಕೂ ಇರುವ ಸಂಬಂಧ, ಯಾವಾಗ ಯಾವುದು ಒಳ್ಳೆಯದು ಎಂಬ ತಿಳುವಳಿಕೆ—ಪ್ರಜ್ಞೆ. ಸತ್ಯವನ್ನೂ, ಪ್ರಜ್ಞೆಯನ್ನೂ ರೂಢಿಸಿಕೊಳ್ಳುವುದು—ಸಮಾಧಿ. ಸತತವಾಗಿ ಅಭ್ಯಾಸ ಮಾಡಿದರೇನೆ ಈ ಶೀಲ, ಪ್ರಜ್ಞೆ, ಸಮಾಧಿಗಳು ಬರುವುದು. ಈ ಅಭ್ಯಾಸದಲ್ಲಿ ತೊಂದರೆ ಬಂದಾಗ ಬುದ್ಧ ಅದನ್ನು ಪರಿಹರಿಸುತ್ತಿದ್ದ.

ಉದಾಹರಣೆಗೆ ಈ ಪ್ರಸಂಗ ನೋಡಿ -

ಒಂದು ಹಳ್ಳಿಯ ಹತ್ತಿರ, ಹಾದಿಬದಿಯಲ್ಲಿ ಒಂದು ಹುತ್ತವಿತ್ತು. ಆ ಹುತ್ತದಲ್ಲಿ ಒಂದು ಹಾವಿತ್ತು. ದಾರಿಹೋಕರು, ದನಗಳು, ಹತ್ತಿರ ಬಂದರೆ ಅದು ಅವರನ್ನು ಕಚ್ಚುತ್ತಿತ್ತು. ಆದ್ದರಿಂದ ಆ ಹಾವನ್ನು ನೋಡಿದರೆ ಎಲ್ಲರೂ ಹೆದರಿ ಓಡುತ್ತಿದ್ದರು. ಒಂದು ಸಲ ಬುದ್ದ ಆ ದಾರಿಯಲ್ಲಿ ಬಂದ. ಹಾವು ಎದುರಾಯಿತು. ಬುದ್ಧ ಹೆದರಲಿಲ್ಲ. ಹೆದರಿಸಲೂ ಇಲ್ಲ. ಬದಲಿಗೆ ಬುದ್ಧ ಎದುರು ನಿಂತ ಹಾವಿಗೆ ಅಹಿಂಸೆಯನ್ನು ಉಪದೇಶಿಸಿದ. ಬುದ್ಧನ ಪ್ರಭಾವಕ್ಕೆ ಸಿಕ್ಕ ಹಾವು



ಜನರನ್ನು ಹಿಂಸಿಸಲು ಹೊಂಚು ಹಾಕುತ್ತಿರುವ ಹಾವು

ಅಹಿಂಸೆಯ ವ್ರತ ತೆಗೆದುಕೊಂಡಿತು. ಸ್ವಲ್ಪ ದಿನಗಳಲ್ಲಿ ಹಾವು ಕಚ್ಚುವುದಿಲ್ಲ ಎಂದು ಜನರಿಗೆ ತಿಳಿಯಿತು. ಚಿಕ್ಕ ಹುಡುಗರು ಅದಕ್ಕೆ ಕಲ್ಲು ಹೊಡೆಯಲು ಆರಂಭಿಸಿದರು. ಹಾವು ಹೆದರಿಕೊಂಡು ಕುಳಿತಿತು. ನಾಲ್ಕುತಿಂಗಳ ಮೇಲೆ ಬುದ್ಧ ಮತ್ತೆ ಅದೇ ದಾರಿಯಲ್ಲಿ ಬಂದ. ಬಂದವನು ಹಾವನ್ನು ಕೂಗಿ ಕರೆದ. ನಜ್ಜುಗುಜ್ಜಾದ ಹಾವು ಹೆದರುತ್ತಾ ಬಂದು ಬುದ್ಧನಿಗೆ ನಮಸ್ಕರಿಸಿತು. ಅದರ ಕಷ್ಟ ತಿಳಿದ ಬುದ್ಧ - 'ನಾನು ನಿನಗೆ ದ್ವೇಷಿಸಬೇಡ ಎಂದೆ. ಹಾಗೇ ನೀನು ಹೆದರಿಕೊಳ್ಳಲೂ ಬಾರದು. ಕೋಪ ಮಾಡಿಕೊಳ್ಳಬೇಡ ಎಂದೆ. ಕೋಪ ತೋರಿಸಬೇಡ ಎನ್ನಲಿಲ್ಲವಲ್ಲ! ಕಚ್ಚಬೇಡ ಎಂದೆನೆ ಹೊರತು ಬುಸುಗುಡಬೇಡ ಎನ್ನಲಿಲ್ಲವಲ್ಲ !" ಎಂದು ಕಿವಿ ಮಾತು ಹೇಳಿದ. ಹಾವಿಗೆ ಶೀಲ, ಪ್ರಜ್ಞೆಗಳು ತಿಳಿದವು. ಹಿಂಸೆ ಬಿಟ್ಟು ಬದುಕುವುದು ತಿಳಿಯಿತು.

ಹೀಗೆ ಬುದ್ಧನ ಉಪದೇಶವೆಂದರೆ ಭಾಷಣ ಮಾಡಿ ಬಿಟ್ಟುಬಿಡುತ್ತಿರಲಿಲ್ಲ. ಸರಳವಾಗಿ, ಸುಂದರವಾಗಿ, ಹಿತವಾಗಿ ತಿಳಿಯಹೇಳುತ್ತಿದ್ದ. ಅದಕ್ಕೆ ಅವನು ಜನರು ಆಡುತ್ತಿದ್ದ ಭಾಷೆಯನ್ನೇ ಬಳಸಿದ. ಬುದ್ಧ ಹೆಚ್ಚಾಗಿ ಓಡಾಡಿದ್ದು ಮಗಧದಲ್ಲಿ. ಆ ಮಗಧವೆಂದರೆ ಇಂದಿನ ಬಿಹಾರ. ಹಿಂದೆ ಇಲ್ಲಿನ ಭಾಷೆಗೆ ಮಾಗಧೀ ಎನ್ನುತ್ತಿದ್ದರು. ಮಾಗಧಿಗೆ 'ಪಾಲೀ' ಎಂದೂ ಹೆಸರಿದೆ. ಬುದ್ಧನ ಉಪದೇಶಗಳಿರುವುದು ಈ 'ಪಾಲೀ' ಭಾಷೆಯಲ್ಲಿ. ಬುದ್ಧ ದೊಡ್ಡಪದಗಳಲ್ಲಿ ಮರುಳು ಮಾಡುತ್ತಿರಲಿಲ್ಲ. ಬದಲಿಗೆ ಹಾಡು, ಕಥೆಗಳ ಮೂಲಕ ಹೇಳಿದ್ದು ಮನಸ್ಸಿಗೆ ಹಿಡಿಸುವಂತೆ ಮಾಡುತ್ತಿದ್ದ. ಜನರಿಗೆ ಗೊತ್ತಿದ್ದ ಕಥೆಗಳನ್ನೂ ಹೇಳಿ ತನ್ನ ಉಪದೇಶಕ್ಕೆ ಹೊಂದಿಸುತ್ತಿದ್ದ. ಮುಖ್ಯವಾದ ಅಂಶಗಳನ್ನು ಪದ್ಯಗಳಲ್ಲಿ ಹೇಳುತ್ತಿದ್ದ. ಆ ಪದ್ಯಗಳನ್ನು 'ಗಾಥಾ' ಎನ್ನುತ್ತಾರೆ.

ಬುದ್ಧನು ಉಪದೇಶ ಕೊಟ್ಟ ಮಾತುಗಳನ್ನು ಬುದ್ಧ ಸಂಘ ಒಟ್ಟಿಗೆ ಸಂಗ್ರಹಿಸಿದೆ. ಇದಕ್ಕೆ ತಿಪಿಟಕ ಎಂದು ಹೆಸರು. ಈ ತಿಪಿಟಕದ ಒಂದು ಭಾಗ ಜಾತಕ. ಇಲ್ಲಿ ಒಂದರಿಂದ ನಾಲ್ಕಾರು ಗಾಥೆಗಳಿರುತ್ತವೆ. ಅದರಲ್ಲಿ ಚುಟುಕಾಗಿ ಒಂದು ಕಥೆ ಮತ್ತು ಉಪದೇಶವಿರುತ್ತದೆ. ಬರಿಯ ಈ ಜಾತಕಗಳನ್ನು ಓದಿದರೆ ನಮಗೆ ಪೂರ್ತಿ ಕಥೆ ತಿಳಿಯುವುದಿಲ್ಲ. ಇಲ್ಲಿನ ಕಥೆಗಳನ್ನು ಬುದ್ಧಘೋಷನೆಂಬ ಭಿಕ್ಷು ವಿವರಿಸಿದ್ದಾನೆ. ಇದು ಬುದ್ಧನ ನಂತರ ಸಾವಿರ ವರ್ಷವಾದಮೇಲೆ



ಹಾವಿಗೆ ಅಹಿಂಸೆಯನ್ನು ಬುದ್ಧ ಉಪದೇಶಿಸುತ್ತಿರುವುದು

ಬರೆದಿದ್ದು. ಬುದ್ಧಘೋಷನು ವಿವರಿಸಿದ ಕಥೆಗಳೇ ಈಗ ಜಾತಕ ಕಥೆಗಳೆಂದು ಪ್ರಸಿದ್ಧವಾಗಿರುವವು.

ಜಾತಕ ಕಥೆ ಎಂದರೆ ಜನ್ಮಾಂತರದ ಕಥೆ ಎಂದರ್ಥ. ಬುದ್ಧ ಹಿಂದಿನ ಕಾಲದ ಕಥೆಯೊಂದನ್ನು ಹೇಳುತ್ತಾನೆ. ಆ ಕಥೆಯೊಳಗಿನ ಪಾತ್ರಗಳನ್ನು ತನ್ನ ಕಾಲದವರ ಜತೆ ಗುರುತಿಸುತ್ತಾನೆ. ಹೀಗೆ ಜಾತಕ ಕಥೆ ಎನ್ನುವುದು ಬುದ್ಧನ, ಅವನ ಶಿಷ್ಯರ ಮತ್ತು ವಿರೋಧಿಗಳ ಜನ್ಮಾಂತರದ ಕಥೆ.

ಪೂರ್ಣ ಅರಿವು ಪಡೆದಾತ ಬುದ್ಧ. ಬುದ್ಧನಾಗುವ ಮುಂಚಿನ ಜನ್ಮಗಳಲ್ಲಿ ಅವನನ್ನು ಬೋಧಿಸತ್ವ ಎನ್ನುತ್ತಾರೆ. ಜಾತಕ ಕಥೆಗಳನ್ನು ಬೋಧಿಸತ್ವನ ಕಥೆಗಳೆಂದೂ



ಬುದ್ಧೋಪದೇಶ

ಕರೆಯುವುದುಂಟು. ಒಂದು ರೀತಿ ಒಳ್ಳೆತನ, ಬುದ್ಧಿವಂತಿಕೆಗಳೆರಡೂ ಇರುವವರೆಲ್ಲ ಬೋಧಿಸತ್ವರೇ.

ಬೋಧಿಸತ್ವರು ಮನುಷ್ಯರಾಗಿ, ಪ್ರಾಣಿಗಳಾಗಿ, ಪಕ್ಷಿಗಳಾಗಿ, ದೇವತೆಗಳಾಗಿ ಕಾಣಿಸಿಕೊಳ್ಳುತ್ತಾರೆ. ಇಂತಹ ಕಥೆಗಳು 'ಪಂಚತಂತ್ರ' ಮುಂತಾದ ಪುಸ್ತಕಗಳಲ್ಲೂ ಕಾಣಬಹುದು. ಎಷ್ಟೋ ಜಾನಪದ ಕಥೆಗಳೂ ಜಾತಕ ಕಥೆಗಳಂತಿವೆ. ಅವು ನಮ್ಮ ಮಾತಿನಲ್ಲಿ, ಗಾದೆಗಳಲ್ಲಿ ಸೇರಿಹೋಗಿವೆ. 'ಮೊಸಳೆ ಕಣ್ಣೀರು' ಎನ್ನುವುದು ಇದಕ್ಕೊಂದು ಉದಾಹರಣೆ.

ನೀತಿಯನ್ನು ಪ್ರೀತಿಯಿಂದ ಹೇಳುವ ಜಾತಕ ಕಥೆಗಳು ಬರಿ ನೀತಿಯಷ್ಟೇ ಹೇಳುವುದಿಲ್ಲ. ನೀತಿ ಎಂದರೆ ಒಳ್ಳೆ ಗುಣಗಳನ್ನು ಹೇಳುವುದಲ್ಲವೆ? ಆದರೆ ಜಾತಕಗಳು ಗುಣಗಳ ಪರಮ ಸ್ಥಿತಿಯನ್ನು ಹೇಳುತ್ತವೆ. ಇದನ್ನೇ ಪಾಲಿ ಭಾಷೆಯಲ್ಲಿ 'ಪಾರಮಿ' ಎನ್ನುತ್ತಾರೆ. ಬೋಧಿಸತ್ವರು ತೋರಿಸಿದ ಗುಣಗಳ ಪರಮಸ್ಥಿತಿ ಪಾರಮಿ. ಜಾತಕ ಕಥೆಗಳು ಇಂತಹ ಪಾರಮಿಗಳನ್ನು ತಿಳಿಸುತ್ತವೆ. ಅಂತಹ ಪಾರಮಿಗಳು ಹತ್ತು; ಅವುಗಳೆಂದರೆ, ದಾನ, ಶೀಲ, ತ್ಯಾಗ, ಪ್ರಜ್ಞೆ, ಸತತ ಪ್ರಯತ್ನ, ಸಹನೆ, ಸತ್ಯ, ಲೋಕ ಹಿತಕ್ಕೆ ದುಡಿಯುವ ಬುದ್ಧಿ, ಮೈತ್ರಿ, ನಿಂದೆ ಕಷ್ಟಗಳಿಗೆ ಉಪೇಕ್ಷೆ. ಒಂದು ಕಥೆಯಲ್ಲಿ ಒಂದೊಂದು ಅಥವಾ ನಾಲ್ಕಾರು ಗುಣಗಳ ಪಾರಮಿ ತಿಳಿಸಿದೆ.

ಬುದ್ಧನ ಧರ್ಮ ತಿಳಿಯಲು ಸಹಾಯವಾದ ಐನೂರಾ ಐವತ್ತು ಜಾತಕಗಳಿಂದ ಆಯ್ದ ಕೆಲವೇ ಕಥೆಗಳು ಇಲ್ಲಿವೆ.

ಇಬ್ಬರು ವ್ಯಾಪಾರಿಗಳ ಕಥೆ

ಒಮ್ಮೆ ಬುದ್ಧ ಸಾವತ್ತಿಯ ಹತ್ತಿರ ಚೇತ ವನದಲ್ಲಿದ್ದ. ಅನಾಥ ಪಿಂಡಕ ಎಂಬ ಸಿರಿವಂತ ಬುದ್ಧನ ಶಿಷ್ಯನಾಗಿದ್ದ. ಆತ ಬೇರೆ ಬೇರೆ ಮತದ ಐನೂರು ಜನರನ್ನು ತನ್ನ ಜತೆ

ಬುದ್ಧನ ಹತ್ತಿರ ಕರೆದು ತಂದ. ಸಿಂಹದ ಘರ್ಜನೆಯ ಹಾಗೆ ಇದ್ದ ಧ್ವನಿಯಲ್ಲಿ ಬುದ್ಧ ಉಪದೇಶಮಾಡಿದ. ಅನಾಥ ಪಿಂಡಕನ ಜತೆ ಬಂದವರು ಬುದ್ಧನ ಉಪದೇಶ ಕೇಳಿ ಅವನ ಶಿಷ್ಯರಾದರು. ಬುದ್ಧ ಹೇಳಿದಂತೆ ಶೀಲವನ್ನು ಕಾಪಾಡಿಕೊಂಡರು. ದಾನ ಉಪವಾಸಗಳಲ್ಲಿ ತೊಡಗಿದರು.

ಕೆಲವು ಕಾಲದ ಮೇಲೆ ಬುದ್ಧ ಸಾವತ್ತಿಯಿಂದ ರಾಜಗೃಹಕ್ಕೆ ಹೋದ. ಬುದ್ಧ ಸಾವತ್ತಿಯನ್ನು ಬಿಟ್ಟಮೇಲೆ ಹೊಸ ಶಿಷ್ಯರು ಬುದ್ಧನ ಧರ್ಮ ಬಿಟ್ಟರು. ತಮ್ಮ ಹಿಂದಿನ ನಂಬಿಕೆ, ನಡವಳಿಕೆಗೆ ಹಿಂತಿರುಗಿದರು. ಏಳೆಂಟು ತಿಂಗಳಾದ ಮೇಲೆ ಬುದ್ಧ ಮತ್ತೆ ಸಾವತ್ತಿಗೆ ಬಂದ. ಅನಾಥ ಪಿಂಡಕ ಮತ್ತೆ ಹಿಂದಿನ ಐನೂರು ಜನರ ಜತೆ ಬಂದು ನಮಸ್ಕರಿಸಿದ. ಉಳಿದವರೂ ನಮಸ್ಕರಿಸಿದರು. ಅನಾಥ ಪಿಂಡಕ'ಇವರೆಲ್ಲ ಬುದ್ಧ ಧರ್ಮವನ್ನು ಬಿಟ್ಟುಬಿಟ್ಟರು' ಎಂದ. ಬುದ್ಧ ಹೌದೇ? ಎಂದು ಕೇಳಿದ್ದಕ್ಕೆ ಅವರೆಲ್ಲ ಹೌದು ಒಂದು ಒಪ್ಪಿದರು. ಒಬ್ಬೊಬ್ಬರಿಗೆ ಒಂದೊಂದು ನಂಬಿಕೆ ಇತ್ತು. ಭಗವಾನ್ ಬುದ್ಧ ಅವರಿಗೆ ಶೀಲ, ಪ್ರಜ್ಞೆ, ಸಮಾಧಿಗಳ ಬಗ್ಗೆ ಮತ್ತೆ ಉಪದೇಶ ಮಾಡಿದ. ಕೊನೆಗೆ ಹೇಳಿದ ಶಿಷ್ಯರೇ, ಹಿಂದೆಯೂ ಅಷ್ಟೆ, ಈಗಲೂ ಅಷ್ಟೆ ನಿಜವನ್ನು ನಂಬಿ ನಡೆದರೆ ಗುರಿ ಮುಟ್ಟಬಹುದು. ನಿಜವನ್ನು ಬಿಟ್ಟು, ಸಿಕ್ಕಿದ ಮಾತಿಗೆ ಮರುಳಾದರೆ ಜಕ್ಕಣಿ ಬಾಯಿಗೆ ತುತ್ತಾಗುತ್ತಾರೆ ಎಂದು ಇಬ್ಬರು ವ್ಯಾಪಾರಿಗಳ ಕಥೆ ಹೇಳಿದ-

ಹಿಂದೆ ಕಾಶೀ ದೇಶದ ವಾರಣಾಸಿಯಲ್ಲಿ ಬ್ರಹ್ಮದತ್ತನೆಂಬ ರಾಜನಿದ್ದ. ಆತನ ರಾಜ್ಯದಲ್ಲಿ ದೊಡ್ಡ ವ್ಯಾಪಾರಿಯ ಮಗನಾಗಿ ಬೋಧಿಸತ್ವ ಹುಟ್ಟಿದ. ಬೆಳೆದಮೇಲೆ ಅವನೂ ವ್ಯಾಪಾರಕ್ಕೆ ಹೊರಟ. ಅವನು ಪೂರ್ವದಿಂದ ಪಶ್ಚಿಮಕ್ಕೆ, ಪಶ್ಚಿಮದಿಂದ ಪೂರ್ವಕ್ಕೆ ಐನೂರು ಬಂಡಿ ತೆಗೆದುಕೊಂಡು ಹೋಗುತ್ತಿದ್ದ. ಅದೇ ವಾರಣಾಸಿಯಲ್ಲಿ ಅದೇ ಕಾಲದಲ್ಲಿ ಮೂರ್ಖ ವ್ಯಾಪಾರಿ ಒಬ್ಬನಿದ್ದ.

ಒಂದುಸಲ ಬೋಧಿಸತ್ವ ಐನೂರು ಬಂಡಿಯಲ್ಲಿ ಕಾಶೀ ಪೀತಾಂಬರ ತೆಗೆದುಕೊಂಡು ಮಾರಲು ಹೋಗಬೇಕೆಂದಿದ್ದ. ಆವಾಗಲೇ ಮೂರ್ಖ ವ್ಯಾಪಾರಿಯೂ ಪೀತಾಂಬರವನ್ನೇ

ತೆಗೆದುಕೊಂಡು ಅದೇ ದಾರಿಯಲ್ಲಿ ಹೊರಟ. 'ಈ ಮೂರ್ಖನೂ ಜೊತೆಯಲ್ಲಿ ಬಂದರೆ ದಾರಿಯಲ್ಲಿ ಸಾವಿರ ಬಂಡಿ ಒಟ್ಟಿಗೆ ಹೋಗಬೇಕಾಗುತ್ತದೆ. ಆಗ ದಾರಿಯಲ್ಲಿ ಅನ್ನ, ನೀರು, ಮೇವಿಗೆ ಕಷ್ಟವಾಗುತ್ತದೆ. ಆದ್ದರಿಂದ ನಾನೋ, ಅವನೋ ಒಬ್ಬರು ಮೊದಲು ಹೋಗಬೇಕು', ಎಂದು ಬೋಧಿಸತ್ವ ಯೋಚಿಸಿದ. ಮೂರ್ಖನನ್ನು ಕರೆದು ಈ ಯೋಚನೆಯನ್ನು ಮುಂದಿಟ್ಟ. ಮೂರ್ಖನು ಅಂದುಕೊಂಡ "ನಾನು ಮೊದಲು ಹೋದರೆ ರಸ್ತೆಯ ಎಲ್ಲಾ ಸೌಲಭ್ಯ ನನಗೇ ಸಿಗುತ್ತದೆ. ಬೇಕಾದಷ್ಟು ಸೊಪ್ಪು, ಹುಲ್ಲು, ಸೌದೆ, ನೀರು ಸಿಗುತ್ತದೆ. ನೀರು ತಿಳಿಯಾಗಿರುತ್ತದೆ. ನಾನು ಮೊದಲು ಹೋದರೆ ನಾನು ನನಗೆ ಬೇಕಾದ ಬೆಲೆ ಗೊತ್ತುಮಾಡಬಹುದು. ಆದ್ದರಿಂದ ನಾನೇ ಮೊದಲು ಹೋಗುತ್ತೇನೆ". ಹೀಗೆ ಯೋಚಿಸಿದ ಮೂರ್ಖ ತಾನೇ ಮೊದಲು ಹೋಗುತ್ತೇನೆಂದ.

ಬೋಧಿಸತ್ವನಿಗೆ ಅನ್ನಿಸಿತು - 'ಮೊದಲು ಹೋದವರು ದಾರಿಯನ್ನು ಸಪಾಟು ಮಾಡಿರುತ್ತಾರೆ. ಅವರ ಎತ್ತುಗಳು ಹಳೇಹುಲ್ಲು ತಿನ್ನಲಿ, ನನ್ನ ಎತ್ತುಗಳಿಗೆ ಹೊಸ ಚಿಗುರು ಸಿಗುತ್ತದೆ. ನೀರಿಲ್ಲದ ಕಡೆ ಅವರು ತೋಡಿದ ಹಳ್ಳ, ಭಾವಿಗಳೇ ಇರುತ್ತವೆ. ಮೊದಲಲ್ಲೇ ಬೆಲೆ ಕುದುರಿಸುವುದು ಫಜೀತಿ ಕೆಲಸ. ಬೆಲೆ ಕುದುರಿದ ಮೇಲೆ ಮಾರುವುದು ಸುಲಭ.' ಹೀಗೆ ಯೋಚಿಸಿ ಮೂರ್ಖನಿಗೆ 'ನೀನೇ ಮೊದಲು ಹೋಗು' ಎಂದ.

ಮೊದಲು ಹೊರಟ ಮೂರ್ಖ, ಜನವಸತಿ ಬಿಟ್ಟು ಮುಂದೆ ಹೋದ. ಮುಂದೆ ಅರವತ್ತು ಯೋಜನದ ಬೆಂಗಾಡು. ಆ ಬೆಂಗಾಡಿಗೆ ಇಳಿಯುವ ಮೊದಲು ಬೇಕಾದಷ್ಟು ನೀರಿನ ಬಿಂದಿಗೆಗಳನ್ನು ತುಂಬಿಸಿಕೊಂಡ. ನೀರಿನ ಬಿಂದಿಗೆಗಳನ್ನು ಕೊನೆಯ ಬಂಡಿಯಲ್ಲಿಟ್ಟುಕೊಂಡು ಮುಂದೆಸಾಗಿದ. ಮರಳುಗಾಡಿನಲ್ಲಿ ಹೋಗುವಾಗ ನಾಯಕರು ಗಾಳಿ ನೋಡುತ್ತಾರೆ. ಎದುರು ಗಾಳಿ ಇದ್ದರೆ ಗಾಡಿಗಳ ಹಿಂದೆ ಹೋಗುತ್ತಾರೆ. ಹಿಂದಿನಿಂದ ಗಾಳಿ ಬೀಸುತ್ತಿದ್ದರೆ ಗಾಡಿಗಳ ಮುಂದೆ ಹೋಗುತ್ತಾರೆ. ಮೂರ್ಖ ಆಗ ಗಾಡಿಗಳ ಮುಂದಿನಿಂದ ಹೋಗುತ್ತಿದ್ದ.

ಆ ಬೆಂಗಾಡಿನಲ್ಲಿದ್ದ ಯಕ್ಷರಾಜನಿಗೆ ಇವರು ಬರುವ ಸುಳಿವು ಗೊತ್ತಾಯಿತು. ಅವನು ಇವರಿಗೆ ಮೋಸಮಾಡಿ, ಇವರನ್ನು ಬಾಯಾರಿಸಿ ಸಾಯಿಸಿ ತಿನ್ನಬೇಕು ಎಂದುಕೊಂಡ. ಅದಕ್ಕೆ ಬಿಲ್ಲುಬಾಣ ಹಿಡಿದ ಹತ್ತು ಹನ್ನೆರಡು ಅನುಯಾಯಿಗಳ ಜೊತೆ ಹೊರಟ. ಅವರೆಲ್ಲಾ ಮಾಯೆಯಿಂದ ತಲೆ, ಬಟ್ಟೆ, ಮೈಯ್ಯೆಲ್ಲಾ ಒದ್ದೆ ಮಾಡಿಕೊಂಡರು. ತಲೆಮೇಲೆ, ಕೈಯಲ್ಲಿ ಕಮಲದ ಹೂವು ಹಿಡಿದು, ಕಮಲದ ದಂಟು ಮೆಲ್ಲುತ್ತಾ ವ್ಯಾಪಾರಿಯ ಎದುರಿಗೆ ಬಂದರು. ಯಕ್ಷ ದಾರಿ ಪಕ್ಕಕ್ಕೆ ಹೊರಳಿನಿಂತು ಮೂರ್ಖನಿಗೆ ವಂದಿಸಿದ. ಕುಶಲವನ್ನು ಕೇಳಿದ. 'ಎಲ್ಲಿಂದ ಬಂದಿರಿ? ಎತ್ತ ಹೊರಟಿರಿ?' ಎಂದು ವಿಚಾರಿಸಿದ. ಮೂರ್ಖನು ಹಾದಿ ಪಕ್ಕಕ್ಕೆ ಬಂದು 'ಕಾಶಿಯಿಂದ ವ್ಯಾಪಾರಕ್ಕೆ ಹೊರಟಿದ್ದೇವೆ' ಎಂದು ತಿಳಿಸಿದ. ಅಲ್ಲದೆ 'ನೀವು ಬಂದ ದಾರಿಯಲ್ಲಿ ನೀರಿದ್ದ ಹಾಗೆ ಕಾಣುತ್ತೆ. ನಿಮ್ಮ ಮೈಯ್ಯೆಲ್ಲಾ ಒದ್ದೆ. ನಿಮ್ಮ ಹತ್ತಿರ ಕಮಲ ಬೇರೆ ಇದೆ' ಎಂದ. ಅದಕ್ಕೆ ಯಕ್ಷ 'ಅಯ್ಯೋ ಮುಂದೆ ಹಸಿದ ಹರವು ಇದೆ. ಅದಾದ ಮೇಲೆ ನೀರೇ ನೀರು. ಅಲ್ಲಿ ಯಾವಾಗಲೂ ಮಳೆ. ಕೊಳಗಳೆಲ್ಲ ತುಂಬಿಹೋಗಿವೆ'. ಅಷ್ಟು ಹೊತ್ತಿಗೆ ಬಂಡಿಗಳೆಲ್ಲ ಸಾಗಿಹೋಗಿದ್ದವು. 'ಬಂಡಿಯಲ್ಲಿ ಏನಿದೆ?' ಎಂದು ಯಕ್ಷ ಕೇಳಿದ. ಮೂರ್ಖ'ಪೀತಾಂಬರಗಳಿವೆ' ಎಂದ. 'ಕೊನೆ ಬಂಡಿ ತುಂಬಾ ಭಾರವಾಗಿದೆ!' ಎಂದದ್ದಕ್ಕೆ 'ಅದರ ತುಂಬ ನೀರಿದೆ' ಎಂದ. ಅದಕ್ಕೆ ಯಕ್ಷ -'ಇಲ್ಲಿಯವರೆಗೆ ನೀರು ತಂದಿದ್ದು ಒಳ್ಳೆಯದು. ಆದರೆ ಇನ್ನು ಮುಂದೆ ಯಾಕೆ? ಭಾರವಾದ ನೀರು ತೆಗೆದುಕೊಂಡು ಹೋದರೆ ತಡವಾಗುತ್ತೆ. ಇದನ್ನೆಲ್ಲ ಚೆಲ್ಲಿ. ಬೇಗ ಹೋಗಿ, ನೀರಿನ ತಾಣ ಸಿಗುತ್ತದೆ' ಎಂದ. ಅದನ್ನು ನಂಬಿದ ಮೂರ್ಖ ಹಾಗೆ ಮಾಡಿದ. ಒಂದು ಬೊಗಸೆ ನೀರು ಉಳಿಸಲಿಲ್ಲ.

ಎಷ್ಟು ದೂರ ಹೋದರೂ ಮೂರ್ಖನಿಗೆ ನೀರಿನ ತಾಣ ಕಾಣಲಿಲ್ಲ. ಹೊತ್ತು ಮುಳುಗಿದಾಗಲೂ ಹಸಿರು ಕಾಣಲಾಗದೆ ಬೆಂಗಾಡ ಮಧ್ಯೆ ನಿಂತರು. ದನಗಳಿಗೆ ಕುಡಿಯಲು ನೀರಿಲ್ಲದೆ ಬಳಲಿದವು. ತಂದಿದ್ದ ಅಕ್ಕಿ ಬೇಯಿಸಲು ನೀರಿರಲಿಲ್ಲ. ಅನ್ನ ನೀರು ಕಾಣದೆ ಬಂಡಿಕಾರರೆಲ್ಲ ಸುಸ್ತಾಗಿ ಬಿದ್ದುಕೊಂಡರು. ರಾತ್ರಿಯಲ್ಲಿ ಯಕ್ಷರು ಅಲ್ಲಿಗೆ ಬಂದು ಅವರನ್ನೆಲ್ಲಾ

ಮುಕ್ಕಿದರು. ಅವರ ಬುರುಡೆಗಳನ್ನೆಲ್ಲಾ ಸಿಕ್ಕ ಹಾಗೆ ಎಸೆದು ಹೋದರು. ಮೂರ್ಖನ ಐನೂರು ಬಂಡಿ ಹಾಗೆಯೇ ನಿಂತಿದ್ದವು.

ಮೂರ್ಖನು ಊರಿಂದ ಹೊರಟ ಆರು ವಾರದ ಮೇಲೆ ಬೋಧಿಸತ್ವ ಹೊರಟ. ಬೆಂಗಾಡಿಗೆ ಇಳಿಯುವ ಮೊದಲು ಅವನು ಬಂಡಿತುಂಬ ನೀರು ತುಂಬಿಸಿದ ಬಿಂದಿಗೆಗಳನ್ನು ಇಡಿಸಿದ. ಆಗ ತನ್ನ ಜೊತೆಗಾರರಿಗೆ ಕಟ್ಟುನಿಟ್ಟಾಗಿ ಹೇಳಿದ 'ನನ್ನನ್ನು ಕೇಳದೆ ಒಂದು ಬೊಗಸೆ ನೀರೂ ತೆಗೆಯಬಾರದು. ಇದು ನೀರಿಲ್ಲದ ಬೆಂಗಾಡು. ಇಲ್ಲಿ ನಂಜಿನ ಮರಗಳು ಇವೆ. ನಿಮಗೆ ತಿಳಿಯದ ಎಲೆ, ಹಣ್ಣುಗಳನ್ನು ನನ್ನನ್ನು ಕೇಳದೆ ತಿನ್ನಬಾರದು'. ಹೀಗೆ ಕಟ್ಟಪ್ಪಣೆ ಮಾಡಿ ಬೆಂಗಾಡ ಮಧ್ಯೆ ಬರುತ್ತಿದ್ದ.

ಹಿಂದೆ ಮಾಡಿದ ಹಾಗೆ ಈಗಲೂ ಮೋಸ ಮಾಡಬೇಕೆಂದು ಯಕ್ಷ ಬಂದ. ಮೊದಲಿನ ಹಾಗೆ ಒದ್ದೆ ಮೈ ಮಾಡಿಕೊಂಡ, ಕಮಲ ದಂಟು ಹಿಡಿದ ಯಕ್ಷರು ಬೋಧಿಸತ್ವನ ಎದುರು ಬಂದರು. ಯಕ್ಷರಾಜ ಪಕ್ಕಕ್ಕೆ ಸರಿದುನಿಂತ. ಬೋಧಿಸತ್ವನಿಗೆ ಇದು ಮೋಸವೆನ್ನಿಸಿತು. 'ನೀರಿಲ್ಲದ ಕಡೆ ಇವರು ಹೀಗೆ ಬಂದರೆ ನಂಬಬಾರದು. ಹೊಸದಾಗಿ ಸಿಗುವವರೆಗೆ ಇರುವುದನ್ನು ಬಿಡಬಾರದು' ಎಂದುಕೊಂಡ. ಯಕ್ಷನನ್ನು ಮಾತನಾಡಿಸದೆ ಮುಂದೆ ಹೋದ. ಯಕ್ಷ ಹಾಗೆ ಮುಂದೆ ಹೋಗಿ ಕಣ್ಮರೆಯಾದ. ಬೋಧಿಸತ್ವನ ಹಿಂದೆ ಬರುತ್ತಿದ್ದವರು ಅವನ ಹತ್ತಿರ ಹೋಗಿ ಹೇಳಿದರು 'ಈಗ ಎದುರು ಬಂದವರು ಹೇಳಿದರು. ಮುಂದೆ ತುಂಬಾ ನೀರು ಸಿಗುವುದಂತೆ. ಎದುರಿನ ಹಸಿರಿನ ಹರಹು ಮುಗಿದರೆ ಅಲ್ಲಿ ಸದಾ ಮಳೆಯಂತೆ. ಈಗಲೂ ಅಲ್ಲಿ ಮಳೆ ಸುರಿಯುತ್ತಿದೆಯಂತೆ' ಎಂದು. ಬೋಧಿಸತ್ವ ನಕ್ಕ. ಅವರನ್ನು ಪ್ರಶ್ನಿಸಿದ 'ಬೆಂಗಾಡಲ್ಲಿ ಕೊಳವಿರುವುದನ್ನು ಕೇಳಿದ್ದೀರಾ?

'ಇಲ್ಲ.'
'ಮಳೆಯ ಗಾಳಿ ಎಷ್ಟು ದೂರ ಬೀಸುತ್ತದೆ.?'
'ಒಂದು ಯೋಜನದಷ್ಟು'
'ಬಿರುಮಳೆಯ ಮೋಡ ಎಷ್ಟು ದೂರಕ್ಕೆ ಕಾಣುತ್ತದೆ?'
'ಒಂದು ಯೋಜನಕ್ಕೆ'
'ಮಿಂಚು ಎಷ್ಟು ದೂರಕ್ಕೆ ಕಾಣುತ್ತದೆ?'
'ನಾಲ್ಕೈದು ಯೋಜನಗಳಿಗೆ'

'ಗುಡುಗು ಎಷ್ಟು ದೂರ ಕೇಳುತ್ತದೆ?'

'ಎರಡು, ಮೂರು ಯೋಜನಗಳಿಗೆ'

'ಈಗ ಮಳೆ ಗಾಳಿ ಬೀಸುತ್ತಿದೆಯೇ? ಮೋಡ, ಮಿಂಚು ಕಾಣಿಸುತ್ತಿದೆಯೇ? ಗುಡುಗು ಕೇಳುತ್ತಿದೆಯೇ?'

'ಇಲ್ಲ'

'ಹಾಗಿದ್ದರೆ ಮುಂದೆ ಮಳೆ ಬರುತ್ತಿದೆ ಎಂದು ನಂಬುವುದು ಹೇಗೆ? ಎದುರಿಗೆ ಬಂದವರ ಮಾತಿನಲ್ಲಿ ಏನೋ ಮೋಸವಿದೆ', ಹೀಗೆ ಹೇಳಿ ನಿಲ್ಲದೆ ಬಂಡಿಗಳನ್ನು ಹೊಡೆಸಿಕೊಂಡು ಸಾಗಿದ.



ರಕ್ಷಣೆಗೆ ನಿಂತಿರುವ ಬೋಧಿಸತ್ವ

ಹೊತ್ತು ಮುಳುಗುವ ವೇಳೆಗೆ ಬಂಡಿಕಾರರು ಮೂರ್ಖನ ಬಂಡಿಗಳು ನಿಂತಿದ್ದ ಜಾಗಕ್ಕೆ ಬಂದರು. ಬೋಧಿಸತ್ವ ಅಲ್ಲಿದ್ದ ಅಪಾಯವನ್ನು ಕಂಡುಕೊಂಡ. ಬಂಡಿಗಳನ್ನು ಸುತ್ತಲೂ ನಿಲ್ಲಿಸಿದ. ಬೇಗ ಬೇಗ ಎಲ್ಲರ ಊಟ ಮಾಡಿಸಿದ. ಮದ್ಯದಲ್ಲಿ ಎತ್ತುಗಳನ್ನು ಮಲಗಿಸಿ ಸುತ್ತಲೂ ಮನುಷ್ಯರು ಮಲಗಿದರು. ವೀರರ ಜೊತೆ ಬೋಧಿಸತ್ವ ತಾನೇ ಕತ್ತಿ ಹಿರಿದು ಕಾವಲಿಗೆ ನಿಂತ. ಬೆಳಗಾಗ ಬೇಗ ಬೇಗ ಮೂರ್ಖನ ಎತ್ತುಗಳನ್ನೂ ಹೇರುಗಳನ್ನೂ ತೆಗೆದುಕೊಂಡು ಮುಂದೆ ಹೊರಟ. ಇವರು ಬಳಲಿ ಸಾಯಲೆಂದು ಕಾದ ಯಕ್ಷ ನಿರಾಶನಾದ. ಬೋಧಿಸತ್ವ ಹೀಗೆ ಜೋಪಾನವಾಗಿ ತನ್ನ ಜನಗಳನ್ನು ಕರೆದುಕೊಂಡು ಹೋದ. ಮುಂದೆ ಲಾಭದ ವ್ಯಾಪಾರ ಮಾಡಿದ.

ಈ ಕಥೆಯ ಕೊನೆಗೆ ಬುದ್ಧ, ತಾನೇ ಆ ಬೋಧಿಸತ್ವ ಆಗಿದ್ದೆ ಎಂದು ಹೇಳಿದ. ಬುದ್ಧನ ಈ ಕುರಿತ ಉಪದೇಶ ಹೀಗಿದೆ-

ಸುಳ್ಳು ತರ್ಕಕ್ಕೆ ಮಾರುಹೋಗದಿರಿ.


ಹಿಡಿದ ಕೆಲಸ ಸಾಧಿಸಿ.

ನಿಜವನ್ನು ನೋಡಿ ನಂಬಿ.

ಇದು ವಿವೇಕದ ಪಾಠ.

ಬೇರು ಕಿತ್ತು ನೀರು ಹಾಕಿದ ಕಥೆ

ಬುದ್ಧ ಕೋಸಲ ದೇಶದಲ್ಲಿದ್ದಾಗಿನ ಮಾತು ಇದು. ಒಬ್ಬ ಪಾಳೆಗಾರ ಬುದ್ಧನನ್ನೂ ಭಿಕ್ಷು ಸಂಘ ಊಟಕ್ಕೆ ಕರೆದ. ಭಿಕ್ಷುಗಳು ಪಾಳೇಗಾರನ ದೊಡ್ಡ ಅಂಗಳದಲ್ಲಿ ಅಡ್ಡಾಡುತ್ತಿದ್ದರು. ಸುಂದರವಾದ ಗಿಡಗಳ ಮಧ್ಯೆ ಸ್ವಲ್ಪಭಾಗ ಬೋಳು ಬೋಳಾಗಿತ್ತು. ಅದನ್ನು ನೋಡಿದ ಭಿಕ್ಷುಗಳು



ದಡ್ಡತನವನ್ನು ಪ್ರದರ್ಶಿಸುತ್ತಿರುವ ಕೋತಿಗಳು

'ಹೀಗೇಕಾಯಿತು?' ಎಂದು ಕೇಳಿದರು. 'ಅದು ತೋಟದ ಹುಡುಗನ ಅವಿವೇಕದಿಂದ' ಎಂದ ಪಾಳೇಗಾರ. ಆಗ ಬುದ್ಧ ನಕ್ಕು ಈ ಕಥೆ ಹೇಳಿದ :

ಹಿಂದೆ ವಾರಣಾಸಿಯಲ್ಲಿ ಒಂದು ಹಬ್ಬ ಬಂತು. ಅದೇ ಕಾಲಕ್ಕೆ ಕೋತಿಗಳ ಹಿಂಡೊಂದು ರಾಜನ ಉದ್ಯಾನವನಕ್ಕೆ ಬಂದಿತು. ಅದನ್ನು ನೋಡಿ ತೋಟದ ಮಾಲಿ - 'ಕೆಲಸಗಾರರೆಲ್ಲ ಹಬ್ಬಕ್ಕೆ ಹೋಗಿದ್ದಾರೆ. ಈ ಕಪಿಗಳಿಂದಲೇ ಗಿಡಗಳಿಗೆ ನೀರು ಹಾಕಿಸುತ್ತೇನೆ. ನಾನು ಆರಾಮವಾಗಿ ಹಬ್ಬಕ್ಕೆ ಹೋಗಬಹುದು'. ಎಂದು ಯೋಚಿಸಿದ. ಮಾಲಿ ಕಪಿನಾಯಕನ ಹತ್ತಿರ ಹೋಗಿ ಅವರಿಗೆ ಬೇಕಾದ ಹಣ್ಣು ತಿನ್ನಲು ಕೊಟ್ಟ. ಕಪಿ ರಾಜನು ಉದಾರಿ ಎಂದು ಹೊಗಳಿದ. ಕಪಿಗಳೂ ಖುಷಿಪಟ್ಟವು. ಆಮೇಲೆ ಕಪಿನಾಯಕನಿಗೆ ಮಾಲಿ ಹೇಳಿದ -'ಈ ದಿನ ಹಬ್ಬ. ನಾನೂ ಊರಿಗೆ ಹೋಗಿ ಖುಷಿಪಟ್ಟು ಬರುತ್ತೇನೆ. ನಾನು ಹೋಗಿರುವಾಗ ನೀವು ಗಿಡಗಳಿಗೆ ನೀರು ಹಾಕುತ್ತೀರಾ?' 'ಓಹೋ! ಆಗಲಿ, ಅದಕ್ಕೇನು!' ಎಂದು ಕೋತಿಗಳು ಒಪ್ಪಿದವು. 'ಹುಷಾರು! ಎಷ್ಟುಬೇಕೋ ಅಷ್ಟೇ ನೀರು ಹಾಕಿ' ಎಂದು ನೀರಿನ ಪಾತ್ರೆಗಳನ್ನು ಕೊಟ್ಟ ಮಾಲಿ ಊರೊಳಗೆ ಹೋದ.

ಕೋತಿಗಳು ಬಿಂದಿಗೆಗಳಲ್ಲಿ ನೀರೆರೆಯಲು ಆರಂಭಿಸಿದವು. 'ನಾವು ನೀರು ಹಾಳು ಮಾಡಬಾರದು' ಎಂದಿತು ಕಪಿನಾಯಕ. 'ಸರಿ ಒಂದೊಂದೇ ಗಿಡದ ಬೇರು ನೋಡಿ ಎಷ್ಟು ಬೇಕೋ ಅಷ್ಟು ಹಾಕೋಣ. ಆಳವಾಗಿ ಬೇರು ಬಿಟ್ಟಿದ್ದರೆ ಹೆಚ್ಚು ನೀರು. ಚಿಕ್ಕ ಬೇರಿಗೆ ಕಡಿಮೆ ನೀರು' ಹೀಗೆಂದು ಗೊತ್ತು ಮಾಡಿಕೊಂಡವು. ಬೇರು ಎಷ್ಟುದ್ದ ಇದೆ ಎಂದು ನೋಡಲು ಒಂದೊಂದು ಗಿಡವನ್ನು ಕಿತ್ತವು. ಅಳೆದು ನೋಡಿ ನೀರು ಸುರಿದವು.

ಜಾಣನಾದ ದಾರಿಹೋಕನೊಬ್ಬ, ಕೋತಿಗಳು ಗಿಡ ಕಿತ್ತು, ನೀರು ಹಾಕುವುದನ್ನು ನೋಡಿದ. 'ಹೀಗೇಕೆ ಮಾಡುತ್ತಿದ್ದೀರಿ?' ಎಂದು ಕೋತಿಗಳನ್ನು ಅವನು ಕೇಳಿದ. 'ನಮ್ಮ ನಾಯಕನ ಅಪ್ಪಣೆ' ಎಂದವು ಅವು.'ಮಾಲಿ ನಮಗೆ ಹಣ್ಣು ಕೊಟ್ಟ. ಗಿಡಗಳಿಗೆ ಎಷ್ಟು ಬೇಕೋ

ಅಷ್ಟೇ ನೀರು ಹಾಕಲು ಹೇಳಿದ. ಅವನ ಉಪಕಾರಕ್ಕೆ ನಾವು ಪ್ರತಿಉಪಕಾರ ಮಾಡಬೇಡವೇ?' ಎಂದಿತು ಕಪಿನಾಯಕ.

'ಮೂರ್ಖರ ಸದುದ್ದೇಶವೂ ಕೇಡನ್ನೇ ತರುವುದಲ್ಲಾ' ಎಂದುಕೊಂಡ ದಾರಿಹೋಕ ಕೋತಿಗಳನ್ನು ಓಡಿಸಿದ. ಆ ದಾರಿಹೋಕನೇ ಬೋಧಿಸತ್ವ. ಒಳ್ಳೆಯತನದ ಜೊತೆ ಬುದ್ಧಿಯೂ ಇರಬೇಕೆಂದು ಈ ಗಾಥೆ ಹೇಳಿದ -

ಬುದ್ಧಿ ಇದ್ದರೇನೆ ಯತ್ನವು ಸಫಲ
ದಡ್ಡತನವೇ ದಾರಿಗೆ ಅಡ್ಡಿ
ನೀರುಣಿಸುವ ಕಪಿ ಬುದ್ಧಿಯಲಿ
ಹಾಳಾಗಿದೆ ಗಿಡ ನೋಡಿ.

ಗೌಜುಗ ಹಕ್ಕಿಗಳ ಕಥೆ

ಬುದ್ಧ ಕಪಿಲವಸ್ತುವಿನ ಬಾಳೆ ತೋಟದಲ್ಲಿ ತಂಗಿದ್ದ. ಚಿಕ್ಕ ಕಾರಣಕ್ಕೆ ಭಿಕ್ಷುಗಳಲ್ಲಿ ಜಗಳವಾಯಿತು. ಆಗ ಭಗವಾನರು ಗೌಜುಗ ಹಕ್ಕಿಗಳ ಈ ಕಥೆ ಹೇಳಿದರು.

ಒಮ್ಮೆ ಬೋಧಿಸತ್ವ ಸಾವಿರಾರು ಗೌಜುಗ ಹಕ್ಕಿಗಳ ನಾಯಕನಾಗಿದ್ದ. ಆ ಕಾಡಿಗೆ ಹಕ್ಕಿ ಹಿಡಿಯುವ ಬೇಡನೊಬ್ಬ ಬಂದ. ಅವನು ಗೌಜುಗ ಹಕ್ಕಿಯಂತೆಯೇ ಶಬ್ದಮಾಡುತ್ತಿದ್ದ. ಆ ಶಬ್ಧಕ್ಕೆ ಗೌಜುಗ ಹಕ್ಕಿಗಳು ಒಟ್ಟಿಗೆ ಬರುತ್ತಿದ್ದವು. ಹಾಗೆ ಅವು ಒಟ್ಟಿಗೆ ಬಂದಾಗ ಅವುಗಳ ಮೇಲೆ ಬಲೆ ಬೀಸಿ ಅವುಗಳನ್ನು ಹಿಡಿಯುತ್ತಿದ್ದ.

ಇದನ್ನು ಗಮನಿಸಿ ಬೋಧಿಸತ್ವ ತನ್ನವರಿಗೆಲ್ಲ ಹೇಳಿದ 'ಈ ಬೇಡ ಬಲೆ ಬೀಸಿದಾಗ ನೀವೆಲ್ಲ ತೂತಿನಿಂದ ತಲೆಹೊರಗೆ ಹಾಕಿ ಒಟ್ಟಿಗೆ ಹಾರಿಬಿಡಿ. ಆಮೇಲೆ ಬಲೆಯನ್ನು ದೂರದ



ಗೌಜು ಪಕ್ಷಿಗಳಿಗೆ ಬುದ್ಧಿ ಹೇಳುತ್ತಿರುವ ಬೋಧಿ ಸತ್ವ

ಮುಳ್ಳು ಪೊದರಿನ ಮೇಲೆ ಹಾಕಿಬಿಡಿ. ನೀವು ತಪ್ಪಿಸಿಕೊಳ್ಳಿ' 'ಸರಿ ಒಳ್ಳೆಯದು' ಎಂದು ಮಾರನೆ ದಿನ ಎಲ್ಲರೂ ಹಾಗೇ ಮಾಡಿದರು. ಹೀಗೆ ಬಲೆಯನ್ನು ತೆಗೆದುಕೊಂಡು ಹಾರುವುದು, ಮುಳ್ಳು ಪೊದರಿನ ಮೇಲೆ ಹಾಕುವುದು, ಪೊದರಿನ ತಳಗಿಂದ ತಪ್ಪಿಸಿಕೊಳ್ಳುವುದು ಇದು ಬಹಳ ದಿನ ನಡೆಯಿತು.

ಬೇಡ ಆಸೆ ಬಿಡಲಿಲ್ಲ. ಹಕ್ಕಿಗಳ ನಡತೆಯನ್ನೇ ಪರೀಕ್ಷಿಸುತ್ತಿದ್ದ. ಒಂದು ದಿನ ಒಂದು ಪುಟ್ಟ ಗೌಜುಗ ದೊಡ್ಡ ಗೌಜುಗದ ತಲೆಗೆ ತನ್ನ ಕಾಲು ತಾಕಿಸಿತು. ದೊಡ್ಡ ಗೌಜುಗ ರೇಗಿತು. ಚಿಕ್ಕದು 'ತಿಳಿಯದೇ ಮಾಡಿದೆ ಏನೀಗ' ಎಂದಿತು. ಸಮಯ ನೋಡಿ ಬೇಡ ಬಲೆ

ಬೀಸಿದ. 'ನಿನ್ನ ತಲೆಯೇ ದೊಡ್ಡದಲ್ಲವೆ ನೀನೆ ತಲೆ ತೂರಿಸು' ಎಂದು ಚಿಕ್ಕ ಹಕ್ಕಿ ದೊಡ್ಡ ಹಕ್ಕಿಗೆ ಹೇಳಿತು. 'ನಿನ್ನ ಕಾಲು, ನಿನ್ನ ರೆಕ್ಕೆಗಳೇ ಪವಿತ್ರವಲ್ಲವೆ? ನೀನೇ ಮೊದಲು ಹಾರು' ಎಂದು ದೊಡ್ಡ ಹಕ್ಕಿ ಚಿಕ್ಕದಕ್ಕೆ ಹೇಳಿತು. ಇವು ಹೀಗೆ ಜಗಳವಾಡುತ್ತಲೇ ಇದ್ದವು. ಬಲೆಯಲ್ಲಿದ್ದ ಹಕ್ಕಿಗಳು ಹಾರಲು ಆಗಲೇ ಇಲ್ಲ. ಬೇಡ ಅವುಗಳನ್ನು ಹಿಡಿದುಕೊಂಡು ಹೋದ. ಬಹಳ ದಿನದ ಮೇಲೆ ಗೌಜುಗಗಳನ್ನು ಹಿಡಿದು ತಂದ ಗಂಡನನ್ನು ನೋಡಿ ಬೇಡನ ಹೆಂಡತಿಗೆ ಅಚ್ಚರಿಯಾಯಿತು. ಹೆಂಡತಿಗೆ ಬೇಡ ಹೇಳಿದ ಗಾಥೆ ಇದು -

ಒಮ್ಮತದಿಂದ ಒಟ್ಟಿಗೆ ಇದ್ದರೆ ಹಕ್ಕಿಗಳೂ ತಲೆ ಎತ್ತುವವು.

ಒಳಗೇ ಜಗಳ ಹತ್ತಿಬಿಟ್ಟರೆ ಒಟ್ಟಿಗೇ ಬಲೆಗೆ ಬೀಳುವವು.

ಇದನ್ನೆಲ್ಲ ನೋಡುತ್ತಿದ್ದ ಬೋಧಿಸತ್ವ ಇನ್ನು ತಾನಲ್ಲಿರುವುದು ಸರಿಯಿಲ್ಲ ಎಂದುಕೊಂಡಿತು. ಜತೆಗೆ ಬಂದವರನ್ನು ಕರೆದುಕೊಂಡು ಬೇರೆ ಕಾಡಿಗೆ ಹಾರಿಹೋಯಿತು.

ಬುದ್ಧ ನಿಜವಾದ 'ಸಂಘ' ಹೇಗಿರಬೇಕು ತಿಳಿಯಿತೆ? ಎಂದು ಈ ಕತೆ ಹೇಳಿದ.

ಚುಲ್ಲಕ ಸೆಟ್ಟಿ ಹೇಳಿದ ಕಥೆ

ಒಮ್ಮೆ ಬುದ್ಧ ಜೀವಕನ ಮಾವಿನ ತೋಪಿನಲ್ಲಿದ್ದ. ಆಗ ಅಲ್ಲಿದ್ದ 'ಚುಲ್ಲ ಪಂಥಕ'ನೆಂಬ ಹಿರಿಯ ಭಿಕ್ಷುವಿಗೆ ಈ ಕತೆ ಹೇಳಿದ.

ರಾಜಗೃಹದ ಧನಿಕನ ಮಗಳು ಒಬ್ಬ ದಾಸನನ್ನು ಪ್ರೀತಿಸಿದಳು. ರಾತ್ರೋರಾತ್ರಿ ಪ್ರೇಮಿಗಳಿಬ್ಬರೂ ಮನೆಯಿಂದ ಓಡಿಹೋದರು. ಅವರು ದೂರದ ಹಳ್ಳಿಗೆ ಹೋಗಿ ವಾಸ ಮಾಡಿದರು. ಧನಿಕನ ಮಗಳು ಮೊದಲ ಬಸಿರಲ್ಲಿ ತವರು ಮನೆಗೆ ಹೊರಟಳು. ದಾರಿಯಲ್ಲೇ

ಮಗನನ್ನು ಹೆತ್ತಳು. ಹಾದಿಯಲ್ಲಿ ಹುಟ್ಟಿದ ಕೂಸಿಗೆ 'ಪಂಥಕ' ಎಂದು ಹೆಸರಿಟ್ಟಳು. ತವರು ಮನೆಗೆ ಹೋಗದೆ ಆಕೆ ಹಿಂದಿರುಗಿದಳು. ಎರಡನೆ ಕೂಸು ಸಹ ಹೀಗೆಯೇ ದಾರಿಯಲ್ಲಿ ಹುಟ್ಟಿತು. ಅವನನ್ನೂ 'ಪಂಥಕ' ಎಂದರು. ಅಲ್ಲಿಂದ ಮುಂದೆ ಮೊದಲಿನವನು 'ಮಹಾ ಪಂಥಕ' ಎನ್ನಿಸಿಕೊಂಡ. ಎರಡನೆಯವನು 'ಚುಲ್ಲಕ ಪಂಥಕ' ಆದ.

ಬೆಳೆದ ಮಕ್ಕಳು ತಮ್ಮ ಅಜ್ಜಿ, ತಾತ, ನೆಂಟರು ಯಾರು ಎಂದು ಕೇಳಿ ಗಲಾಟೆ ಮಾಡಿದರು. ತಾಯಿ, ತಂದೆ ಅವರನ್ನು ಕರೆದುಕೊಂಡು ರಾಜಗೃಹಕ್ಕೆ ಬಂದರು. ಅಲ್ಲಿ ಒಂದು ಛತ್ರದಲ್ಲಿ ಇಳಿದರು. ಧನಿಕನ ಮಗಳು ತನ್ನ ತಂದೆಗೆ ಹೇಳಿ ಕಳುಹಿಸಿದಳು. ಧನಿಕ ಮೊಮ್ಮೊಕ್ಕಳ ಕಥೆ ಕೇಳಿದ. 'ಮಗಳು ತಪ್ಪು ಮಾಡಿ ಮುಖ ತೋರಿಸದೇ ಹೋಗಿದ್ದಾಳೆ, ನಾನು ಅವಳನ್ನು ನೋಡುವುದಿಲ್ಲ. ಮೊಮ್ಮೊಕ್ಕಳು ನನ್ನ ಹತ್ತಿರ ಬರಲಿ' ಎಂದು ಧನಿಕ ಉತ್ತರ ಕಳುಹಿಸಿದ. ಮಗಳಿಗೆ ಒಂದಿಷ್ಟು ಹಣ ಕಳುಹಿಸಿದ.

ಹೀಗೆ ಮಹಾಪಂಥಕ, ಚುಲ್ಲಕಪಂಥಕರು ತಾಯಿ ತಂದೆಯಿಲ್ಲದೆ ತಾತನ ಮನೆ ಸೇರಿದರು. ಮಹಾಪಂಥಕ ತಾತನ ಜತೆ ಬುದ್ಧನ ಉಪದೇಶ ಕೇಳಲು ಹೋಗುತ್ತಿದ್ದ. ವಯಸ್ಸಿಗೆ ಬಂದಾಗ ಸಂಘ ಸೇರಲು ಮನಸ್ಸು ಮಾಡಿದ. ತಾತನೇ ಅವನನ್ನು ಬುದ್ಧನ ಹತ್ತಿರ ಒಯ್ದು ಸಂನ್ಯಾಸ ಕೊಡಿಸಿದ. ಎಷ್ಟೋ ಬುದ್ಧ ವಚನಗಳನ್ನು ಬಾಯಿಪಾಠ ಮಾಡಿ ಮಹಾಪಂಥಕ ಭಿಕ್ಷುವಾದ. ಎಡೆಬಿಡದೆ ಅಭ್ಯಾಸ ಮಾಡಿ ಅರ್ಹಂತನಾದ.

ಕೆಲವು ಕಾಲದ ಮೇಲೆ ಮಹಾಪಂಥಕ ಚುಲ್ಲಕಪಂಥಕನನ್ನು ಸಂಘಕ್ಕೆ ಸೇರಿಸಿಕೊಂಡ. ನಾಲ್ಕು ತಿಂಗಳಾದರೂ ಚುಲ್ಲಕಪಂಥಕನಿಗೆ ಒಂದು ಸಾಲೂ ಬಾಯಿಗೆ ಬರಲಿಲ್ಲ- ದಡ್ಡನ ಹಾಗಿದ್ದ. ಇದಕ್ಕೆ ಕಾರಣ ಹಿಂದಿನ ಜನ್ಮದಲ್ಲಿ ಅವನು ವಿದ್ವಾಂಸನಾಗಿದ್ದಾಗ ಕಲಿಯಲು ಹೆಣಗುತ್ತಿದ್ದ ಶಿಷ್ಯನ ಅಪಹಾಸ್ಯ ಮಾಡಿದ್ದ. ಈಗ ಏನು ಮಾಡಿದರೂ ಕಲಿಯಲಾಗದೆ ತಾನೇ ಚಡಪಡಿಸುತ್ತಿದ್ದ. ಬೇಸತ್ತ ಮಹಾಪಂಥಕ ತಮ್ಮನಿಗೆ ಸಂಘವನ್ನು ಬಿಟ್ಟು ಹೋಗೆಂದು ಹೇಳಿದ.



ಚುಲ್ಲ ಪಂಥಕ ಭಿಕ್ಷುವಿನ ಮೂಢತ್ವವನ್ನು ತೊಲಗಿಸಿದ ರೀತಿ ತಿಳಿ ಹೇಳುತ್ತಿರುವ ಬುದ್ಧ

ಇದೇ ದಿನ ಬುದ್ಧನ ಶಿಷ್ಯನಾದ ಜೀವಕ ವಿಹಾರಕ್ಕೆ ಬಂದ. 'ಎಷ್ಟುಜನ ಭಿಕ್ಷುಗಳು ಇಲ್ಲಿದ್ದಾರೆ?' ಎಂದು ಕೇಳಿದ. ವಿಹಾರಕ್ಕೆ ಅಧಿಪತಿಯಾಗಿದ್ದ ಮಹಾಪಂಥಕ 'ಐನೂರು ಭಿಕ್ಷುಗಳಿದ್ದಾರೆ' ಎಂದ. 'ಐನೂರು ಭಿಕ್ಷುಗಳೂ ಬುದ್ಧನೊಡನೆ ನಾಳೆ ನಮ್ಮ ಮನೆಗೆ ಊಟಕ್ಕೆ ಬನ್ನಿ' ಎಂದು ಜೀವಕ ಆಮಂತ್ರಣ ಕೊಟ್ಟ. ಆದರೆ ಮಹಾಪಂಥಕ-'ಉಪಾಸಕ! ನಮ್ಮಲ್ಲಿ ಒಬ್ಬ ದಡ್ಡನಿದ್ದಾನೆ, ಅವನನ್ನು ಬಿಟ್ಟು ಉಳಿದವರು ಬರುತ್ತೇವೆ' ಎಂದು ಒಪ್ಪಿದ. ಇದನ್ನು ಕೇಳಿದ ಚುಲ್ಲಕಪಂಥಕ 'ತಾನು ಇಲ್ಲಿ ಇನ್ನೇಕೆ ಇರಬೇಕು. ಸಾಮಾನ್ಯ ಉಪಾಸಕನಾಗಿ ಒಳ್ಳೆ ಕೆಲಸ ಮಾಡುತ್ತೇನೆ' ಎಂದು ಯೋಚಿಸಿದ. ಮಾರನೇ ದಿನ ಬೆಳಿಗ್ಗೆ ಅವನು ವಿಹಾರದಿಂದ ಹೊರಗೆ ಹೊರಟ. ಎದುರಿಗೆ ಬುದ್ಧ ಸಿಕ್ಕಿದ. 'ಬೆಳಗಾಗ ಎಲ್ಲಿ ಹೊರಟೆ?' ಎಂದು ಕೇಳಿದ. ಚುಲ್ಲಕಪಂಥಕ-'ಸಾಮಾನ್ಯನಂತಾಗಲು ಹೊರಟೆ. ನನ್ನಣ್ಣ ನನ್ನನ್ನು ಸಂಘಬಿಟ್ಟು ಹೋಗಲು ಹೇಳಿದ' ಎಂದ. ಬುದ್ಧ-'ನೀನು ದೀಕ್ಷೆ ತೆಗೆದುಕೊಂಡದ್ದು ನನ್ನೆದುರಿಗೆ. ನಿಮ್ಮಣ್ಣ ಕಳುಹಿಸಿದರೆ ನನ್ನ ಹತ್ತಿರ ಬರಬೇಡವೆ? ಈಗ ಇಲ್ಲಿ ಬಾ' ಎಂದು ತನ್ನ ಗಂಧ ಕುಟೀರದ ಎದುರಿಗೆ ಕೂಡಿಸಿದ. ಅವನ ಕೈಗೆ ಒಂದು ಶುಭ್ರ ಬಟ್ಟೆ ಕೊಟ್ಟ. 'ರಜೋ ಹರಣಂ' 'ಕೊಳೆ ತೆಗಿ' ಎಂದು ಜಪಿಸುತ್ತಾ ಈ ಬಟ್ಟೆಯನ್ನು ಒರೆಸುತ್ತಾ ಕೂತಿರು' ಎಂದು ಹೇಳಿದ. ಆಮೇಲೆ ಉಳಿದ ಭಿಕ್ಷುಗಳ ಜತೆ ಬುದ್ಧ ಜೀವಕನ ಮನೆಗೆ ಊಟಕ್ಕೆ ಹೋದ. ಬುದ್ಧನು ಹೇಳಿದಂತೆ ಚುಲ್ಲಕಪಂಥಕ ಬಟ್ಟೆ ಉಜ್ಜುತ್ತಾ ಕೂತ. ಬಟ್ಟೆ ಕಪ್ಪಾಗತೊಡಗಿತು. ಅದನ್ನು ನೋಡಿ ಅವನಿಗೆ ಹೀಗೆ ಹೊಳೆಯಿತು. -'ಈಗ ಬೆಳ್ಳಗಿದ್ದ ಬಟ್ಟೆ ನನ್ನ ಕೈಯಿಂದ ಕಪ್ಪಾಯಿತು. ಬಟ್ಟೆಗೆ ಸೇರಿದ ಯಾವುದೂ ಶುಭ್ರವಾಗಿರುವುದಿಲ್ಲ'', ಹೀಗೆ ಜಗತ್ತಿನ ದುಃಖ, ಕೊಳೆ ಅವನಿಗೆ ಅರಿವಾಯಿತು. ''ಕಾಮದಲ್ಲಿ ಕೊಳೆ ಇದೆ, ಕ್ರೋಧದಲ್ಲಿ ಕೊಳೆ ಇದೆ, ಮೋಹದಲ್ಲಿ ಕೊಳೆ ಇದೆ. ಇವೇ ನಿಜವಾಗಿ ಕೊಳೆ. ಅವನ್ನು ಎದೆಯಿಂದ ತೊರೆದವನೇ ಶುಚಿ'' ಎಂಬ ಬುದ್ಧನ ಮಾತು ತಿಳಿಯಿತು.

ಇತ್ತ ಜೀವಕ ದಾನ ಕೊಡಲು ಬಂದಾಗ ಬುದ್ಧ ಕೇಳಿದ 'ವಿಹಾರದಲ್ಲಿ ಯಾರೂ ಭಿಕ್ಷುಗಳಿಲ್ಲವೆ?' ಅದನ್ನು ತಿಳಿದು ಬರಲು ಜೀವಕ ತನ್ನ ಸೇವಕನನ್ನು ಅಟ್ಟಿದ. ಸೇವಕ ಬಂದು ನೋಡಿದರೆ ವಿಹಾರದಲ್ಲಿ ಚುಲ್ಲಕಪಂಥಕನಿದ್ದ. ಅದನ್ನು ಸೇವಕ ಬಂದು ತಿಳಿಸಿದ. ಬುದ್ಧ

ಅವನಿಗೆ ಬರಲು ಹೇಳಿಕಳುಹಿಸಿದ. ಚುಲ್ಲಕಪಂಥಕ ಜೀವಕನ ಮನೆಗೆ ಬಂದ. ಅಲ್ಲಿ ಬುದ್ಧ ವಚನಗಳನ್ನು ಬೇಕಾದಷ್ಟು ಹೇಳಿದ. ಎಲ್ಲರೂ ಬೆರಗಾದರು. ಒಂದು ಸಾಲು ಬಾರದವನು ಹೇಗೆ ಇಷ್ಟೊಂದು ಅರಿತ ಎಂದು ಯೋಚಿಸಿದರು.

ಮಾರನೆ ದಿನ ಬುದ್ಧ ಹೇಳಿದ 'ಸಕಾಲಕ್ಕೆ ಆರಂಭಿಸಿ, ಸರಿಯಾಗಿ ಪ್ರಯತ್ನಿಸಿದರೆ ಎಲ್ಲಾ ಪ್ರಯತ್ನಗಳೂ ಫಲಿಸುತ್ತವೆ. ಹಿಂದೆ ಚುಲ್ಲಕನಿಗೆ ನಾನೇ ಸಹಾಯ ಮಾಡಿದ್ದೆ'. ಹೀಗೆಂದು ಚುಲ್ಲಕ ಶೆಟ್ಟಿ ಕಥೆ ಹೇಳಿದ.

ಹಿಂದೆ ಕಾಶಿಯಲ್ಲಿ ಬ್ರಹ್ಮದತ್ತ ಆಳುತ್ತಿದ್ದಾಗ ಬೋಧಿಸತ್ವ ಶೆಟ್ಟಿಯ ಮಗನಾದ. ಅವನಿಗೆ ಚುಲ್ಲಕ ಶೆಟ್ಟಿಯೆಂದೇ ಹೆಸರು. ಬೀದಿಯಲ್ಲಿ ಹೋಗುತ್ತಾ ಒಂದು ದಿನ ಒಂದು ಸತ್ತ ಇಲಿ ನೋಡಿದ.'ಜಾಣನಾದವನು ಈ ಇಲಿ ತೆಗೆದುಕೊಂಡು ದೊಡ್ಡ ವ್ಯಾಪಾರ ಮಾಡಬಲ್ಲ' ಎಂದ ಆ ಮಾತು ಕೇಳಿದ ದುಃಸ್ಥಿತಿಯಲ್ಲಿದ್ದ ಜಾಣ ಹುಡುಗನೊಬ್ಬ-'ಇವನು ಹೇಳಿದ್ದರಲ್ಲಿ ಯಾವಾಗಲೂ ಹುರುಳಿದೆ' ಎಂದು ಸತ್ತ ಇಲಿ ತೆಗೆದುಕೊಂಡ. ಒಂದು ಅಂಗಡಿಯಲ್ಲಿ ಬೆಕ್ಕು ಇಟ್ಟುಕೊಂಡಿದ್ದವನಿಗೆ ಒಂದು ಕಾಸಿಗೆ ಮಾರಿದ. ಒಂದು ಕಾಸಲ್ಲಿ ಗಡಿಗೆ ತೆಗೆದುಕೊಂಡ, ಕಾಡಿನಿಂದ ಹೂ ತರುತ್ತಿದ್ದ ದಣಿದಿದ್ದ ಹೂವಾಡಿಗರಿಗೆ ನೀರು ತೆಗೆದುಕೊಂಡು ಹೋಗಿ ಕೊಟ್ಟ. ಅವರು ಇವನಿಗೆ ಹೂವು, ಹೂ ಗಿಡಗಳನ್ನು ಕೊಟ್ಟರು. ಹೂ ಮಾರಿ ಎಂಟಾಣೆ ಸಂಪಾದಿಸಿದ. ಒಂದು ಪೊರಕೆ ಕೊಂಡುಕೊಂಡ.

ಒಂದು ಸಲ ಜೋರು ಮಳೆಯೂ ಬಂತು. ರಾಜನ ಉದ್ಯಾನದಲ್ಲಿ ಟೊಂಗೆ ಎಲೆ ಮುರಿದು ಬಿದ್ದವು. ಅದನ್ನೆಲ್ಲ ತೆಗೆಯಬೇಕೆಂದು ಮಾಲಿಗೆ ರಾಜ ಹೇಳಿದ. ಈ ಹುಡುಗ ತಾನು ಅದನ್ನು ಗುಡಿಸಿ ತೆಗೆದುಕೊಂಡು ಹೋಗುತ್ತೇನೆ ಎಂದ. ಮಾಲಿ ಒಪ್ಪಿದ. ಹುಡುಗ ಎಲೆ ಟೊಂಗೆ ತೆಗೆದುಕೊಂಡು ಹೋಗಿ ಒಣಗಿಸಿದ. ಉರವಲಾದ ಅದನ್ನು ಕುಂಬಾರನಿಗೆ ಮಾರಿದ. ಅದರಿಂದ ಹದಿನಾರು ಆಣೆ, ಒಂದಿಷ್ಟು ಪಾತ್ರೆ ಸಿಕ್ಕಿತು.

ಹುಡುಗ ಮತ್ತೆ ದೊಡ್ಡ ಮಡಕೆಗಳಲ್ಲಿ ನೀರು ತೆಗೆದುಕೊಂಡ. ಊರ ಬಾಗಿಲಲ್ಲಿ ಹುಲ್ಲು ತರುತ್ತಿದ್ದವನಿಗೆ ತೆಗೆದುಕೊಂಡು ಹೋಗಿ ಕೊಟ್ಟ. ಹೀಗೆ ನಾಲ್ಕಾರು ದಿನ ಮಾಡಿದ. ಆಗ ದೊಡ್ಡ ಕುದುರೆ ವ್ಯಾಪಾರಿ ಊರಿಗೆ ಬರುವುದು ತಿಳಿಯಿತು. ಮಾರನೆಯ ದಿನ ಎಲ್ಲಾ ಹುಲ್ಲುಗಾರರಿಂದ ಒಂದೊಂದು ಕಟ್ಟು ಹುಲ್ಲು ಕೇಳಿ ಪಡೆದ. ಅವರಿಗೆ ತನ್ನ ಹುಲ್ಲು ಮಾರಾಟ ಆಗುವವರೆಗೆ ಬೇರೆಯವರು ಮಾರಬಾರದು ಎಂದು ಕೇಳಿಕೊಂಡ. ಅವರೆಲ್ಲಾ ಒಪ್ಪಿದರು. ಕುದುರೆ ವ್ಯಾಪಾರಿ ಬಂದಾಗ ಬೇರೆಲ್ಲೂ ಹುಲ್ಲಿಲ್ಲದೆ ಇವನು ಕೇಳಿದಷ್ಟು ಹಣ ಕೊಟ್ಟು ಹುಲ್ಲು ಕೊಂಡ.

ಇನ್ನೊಮ್ಮೆ ಒಂದು ಹಡಗಿನ ತುಂಬಾ ಸರಕು ಬಂದಿದೆ ಎಂದು ತಿಳಿಯಿತು. ಒಂದು ಡೋಲಿಯಲ್ಲಿ ಡೌಲಾಗಿ ಹಡಗಿಗೆ ಹೋದ. ಇಡೀ ಹಡಗನ್ನೇ ಸಾಲದ ಮೇಲೆ ಕೊಂಡುಕೊಂಡ. ವ್ಯಾಪಾರಿಗಳು ಬಂದರೆ ಮೂರು ಬಾಗಿಲು ದಾಟಿಸಿ ಕಳಿಸಿ ಎಂದ. ಬಂದ ವ್ಯಾಪಾರಿಗಳು ಒಬ್ಬೊಬ್ಬರು ಆ ಹಡಗಿನ ಪಾಲುಗಾರಿಕೆಗೆ ಸಾವಿರ ನಾಣ್ಯ ಕೊಟ್ಟರು. ಆಮೇಲೆ ಈ ಹುಡುಗನನ್ನು ಪಾಲುಗಾರಿಕೆಯಿಂದ ಬಿಡಿಸಲು ಇನ್ನೊಂದೊಂದು ಸಾವಿರ ನಾಣ್ಯ ಕೊಟ್ಟರು. ಹೀಗೆ ಎರಡು ಲಕ್ಷ ನಾಣ್ಯದೊಂದಿಗೆ ಚುಲ್ಲಕ ಶೆಟ್ಟಿಯ ಶಿಷ್ಯ ಕಾಶಿಗೆ ಬಂದ.

ಗುರುವಿಗೆ ತನ್ನ ವಂದನೆ ತಿಳಿಸಲು ಒಂದು ಲಕ್ಷ ನಾಣ್ಯ ತೆಗೆದುಕೊಂಡು ಹೋದ. 'ಇದೆಲ್ಲ ಹೇಗೆ ಬಂತು?' ಎಂದು ಕೇಳಲು 'ನಾಲ್ಕು ತಿಂಗಳಲ್ಲಿ ಬಂತು ನಿಮ್ಮ ಉಪದೇಶದಿಂದ' ಎಂದ. ಇವನು ಬೇರೆಯವರ ಬಲೆಗೆ ಬೀಳಬಾರದೆಂದು ಶೆಟ್ಟಿ ತನ್ನ ಮಗಳನ್ನೇ ಕೊಟ್ಟು ಮದುವೆ ಮಾಡಿದ.

ಆನೆಹೊಟ್ಟೆಯಲ್ಲಿ ನರಿ

ಭಗವಾನರು ಜೇತವನದಲ್ಲಿದ್ದರು. ಶಿಷ್ಯರು ಮೆಲ್ಲಗೆ ಕಾಮನೆಗಳಿಗೆ ಬಲಿಯಾಗುತ್ತಿರುವುದನ್ನು ಕಂಡುಕೊಂಡರು. ಆನಂದನಿಗೆ ಹೇಳಿ ಎಲ್ಲರನ್ನೂ ಒಟ್ಟಿಗೆ ಕರೆಸಿದರು.

'ಆಸೆಗಳು ಹುಟ್ಟಿದಾಗ ಕೂಡಲೆ ಆಸೆಯನ್ನು ಕಿತ್ತುಹಾಕಬೇಕು. ಇಲ್ಲದಿದ್ದರೆ ಆಸೆಗಳೊಳಗೇ ಸಿಕ್ಕಿಹಾಕಿ ಕೊಳ್ಳುತ್ತೇವೆ' ಎಂದು ಈ ಕಥೆ ಹೇಳಿದರು.

ಒಮ್ಮೆ ಬೋಧಿಸತ್ವರು ಗಂಗೆಯ ಪಕ್ಕದ ಕಾಡಿನಲ್ಲಿ ನರಿಯಾಗಿ ಹುಟ್ಟಿದರು. ಅದೇ ಕಾಡಿನಲ್ಲಿ ಒಂದು ಮುದಿ ಆನೆ ಸತ್ತು ಬಿದ್ದಿತು. ನರಿಗೆ ಬೇಕಾದಷ್ಟು ಮಾಂಸ ಸಿಕ್ಕಿತೆಂದು ಸಂತೋಷ. ಎಲ್ಲ ತಾನೊಬ್ಬನೇ ತಿನ್ನ ಬೇಕೆಂದುಕೊಂಡಿತು. ಮೊದಲು ಸೊಂಡಿಲಿಗೆ ಬಾಯಿ ಹಾಕಿತು. ಅದು ನೇಗಿಲ ಹಿಡಿಯಂತಿತ್ತು. ಕೊಂಬು ಕಚ್ಚಿದರೆ ಮೂಳೆಗಿಂತ ಗಟ್ಟಿ. ಕಿವಿ ಕಚ್ಚಿದರೆ ಹಳೆ ಮೊರ ತಿಂದಹಾಗಿತ್ತು. ಕಾಲುಗಳು ಗಾರೆಗಂಬದ ಹಾಗಿದ್ದವು. ಬಾಲ ಒನಕೆ ತುಂಡಿನ ಹಾಗಿತ್ತು. ಎಲ್ಲೂ ಕಚ್ಚಿ ತಿನ್ನಲು ಆಗಲಿಲ್ಲ. ಆಗ ಹಿಂಭಾಗದ ಮಾಂಸ ಕಚ್ಚಿತು. ಮೆದುವಾಗಿ ಹದವಾಗಿ ಇದ್ದದ್ದಕ್ಕೆ ಖುಷಿಪಟ್ಟಿತು. ಅಲ್ಲಿಂದ ಮಾಂಸ ಬಗೆಯುತ್ತಾ ತಿನ್ನುತ್ತಾ ಆನೆ ಹೊಟ್ಟೆಯೊಳಗೇ ಹೋಯಿತು.

'ಈ ಆನೆ ಹೆಣ ನನಗೆ ಊಟವೂ ಹೌದು ಮನೆಯೂ ಹೌದು' ಎಂದು ಅಲ್ಲೇ ತಿಂದು ಮಲಗಿತು. ಬಿಸಿಲು ಗಾಳಿಗೆ ಆನೆ ಚರ್ಮವೂ ಮುದುಡಿತು. ನರಿ ಒಳಗೆ ಹೋದ ದಾರಿ ಮುಚ್ಚಿ ಹೋಯಿತು. ಸ್ವಲ್ಪ ಕಾಲಕ್ಕೆ ಮಾಂಸವು ಒಣಗಿ ರಕ್ತವೂ ಇಲ್ಲದೆ ಹೋಯಿತು. ನರಿಗೆ ಒಳಗೆ ಒದ್ದಾಟ. ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಒದೆಯಿತು. ಪುಣ್ಯಕ್ಕೆ ಆಗ ಮಳೆ ಬಂತು. ಒಣಗಿದ್ದ ಚರ್ಮ ನೀರು ಬಿದ್ದ ಕೂಡಲೆ ಒಡೆಯಿತು. ನರಿ ಹೋದ ದಾರಿಯಲ್ಲಿ ಬೆಳಕಿನ ಕಿರಣಬಿತ್ತು. 'ಸದ್ಯ ಬದುಕಿದೆಯಾ' ಅಂತ ನರಿ ಹೊರಕ್ಕೆ ತೆವಳಿಕೊಂಡು ಬಂತು. ಹಾಗೆ ಬರುವಷ್ಟರಲ್ಲಿ ನರಿಕೂದಲೆಲ್ಲಾ ಆನೆ ಒಳಗೆ ಮೆತ್ತಿಕೊಂಡು ಹೋಯಿತು. ಹೊರಗೆ ಓಡಿದ ನರಿ ಸ್ವಲ್ಪದೂರ ಹೋಗಿ ನಿಂತಿತು. ಕೂತುಕೊಂಡು ತನ್ನ ಮೈ ನೋಡಿಕೊಂಡಿತು. ಅಯ್ಯೋ ಅತಿ ಆಸೆ ಪಟ್ಟು ಎಂಥ ಸ್ಥಿತಿಗೆ ಬಂದೆ' ಎಂದು ಕೊಂಡಿತು. ಇನ್ನು ಮುಂದೆ ಅತಿ ಆಸೆ ಎಂದಿಗೂ ಮಾಡುವುದಿಲ್ಲ, ಆನೆಯ ಹೊಟ್ಟೆ ಸೇರುವುದಿಲ್ಲ ಎಂದಿತು.

ಯಾರೂ ಕಾಣದ ಸ್ಥಳ

ಬುದ್ಧ ಜೇತವನದಲ್ಲಿದ್ದ. ಒಂದು ಮಧ್ಯರಾತ್ರಿಯಲ್ಲಿ ಭಿಕ್ಷುಗಳು ಕಾಮ ವಿಕಾರಕ್ಕೆ ಒಳಗಾಗಿದ್ದು ಅವನಿಗೆ ತಿಳಿಯಿತು. ಆಗ ಪ್ರಿಯಶಿಷ್ಯನಾದ ಆನಂದನನ್ನು ಕರೆದ. 'ಎಲ್ಲ ಭಿಕ್ಷುಗಳು ಒಟ್ಟಿಗೆ ಸೇರಲಿ' ಎಂದು ಅಪ್ಪಣೆ ಕೊಡಿಸಿದ. ಎಲ್ಲ ಭಿಕ್ಷುಗಳು ಬಂದು ಸೇರಿದಾಗ ಬುದ್ಧ ಹೇಳಿದ-'ಭಿಕ್ಷುಗಳೇ ಯಾವ ಸ್ಥಳವೂ ರಹಸ್ಯವಾಗಿರುವುದಿಲ್ಲ ಎನ್ನುವುದನ್ನು ಹಿಂದಿನ ಜಾಣರು ತಿಳಿದಿದ್ದರು. ಆದ್ದರಿಂದ ಅವರು ಪಾಪವನ್ನು ಮಾಡಲಿಲ್ಲ'.

'ಹಾಗಾದರೆ ನಮಗೆ ಆ ವಿಷಯ ತಿಳಿಸಿ' ಎಂದು ಭಿಕ್ಷುಗಳು ಕೇಳಿದರು. ಅದಕ್ಕೆ 'ಸರಿ' ಎಂದು ಬುದ್ಧ ಈ ಕಥೆ ಹೇಳಿದ.

ಹಿಂದೆ ಬೋಧಿಸತ್ವ ಕಾಶಿಯಲ್ಲಿ ಹುಟ್ಟಿದ. ಒಬ್ಬ ದೊಡ್ಡ ಗುರುವಿನ ಬಳಿ ಶಿಷ್ಯನಾದ. ಉಳಿದ ಎಲ್ಲ ಶಿಷ್ಯರನ್ನೂ ಮೀರಿಸುವವನಾದ. ಗುರುವು ಉತ್ತಮ ಶೀಲವಂತನಿಗೆ ತನ್ನ ಮಗಳನ್ನು ಕೊಡಬೇಕು ಎಂದುಕೊಂಡ. ಅದಕ್ಕೆ ವಿದ್ಯಾರ್ಥಿಗಳನ್ನು ಒಟ್ಟಿಗೆ ಸೇರಿಸಿ ಗುರು ಹೇಳಿದ 'ನಾನು ನನ್ನ ಮಗಳಿಗೆ ಮದುವೆ ಮಾಡಬೇಕೆಂದಿದ್ದೇನೆ. ಅವಳಿಗೆ ತಕ್ಕನಾದ ಒಡವೆ ವಸ್ತ್ರ ತನ್ನಿ, ಯಾರ ಕಣ್ಣಿಗೂ ಕಾಣದಂತೆ ಕದ್ದು ಒಡವೆ ತಂದವರಿಗೆ ನನ್ನ ಮಗಳನ್ನು ಕೊಡುತ್ತೇನೆ'. ಎಲ್ಲ ಶಿಷ್ಯರೂ 'ಹಾಗೇ ಆಗಲಿ' ಎಂದರು.

ಅಂದಿನಿಂದ ಎಲ್ಲರೂ ಕದಿಯಲು ಆರಂಭಿಸಿದರು. ಗುರುಗಳು ಅವರು ತಂದಿದ್ದನ್ನೆಲ್ಲ ಬೇರೆ ಬೇರೆ ಇರಿಸಿದರು. ಬೋಧಿಸತ್ವನು ಮಾತ್ರ ಏನನ್ನೂ ತರಲಿಲ್ಲ. ಒಂದು ದಿನ ಅವನನ್ನು ಗುರುಗಳು ಕೇಳಿದರು-'ಮಗು ನೀನು ಮಾತ್ರ ಏನನ್ನೂ ತರಲಿಲ್ಲವೆ?' ಎಂದು. ಅವನು 'ಇಲ್ಲ' ಎಂದ. 'ಏಕೆ?' ಎಂದು ಕೇಳಿದ್ದಕ್ಕೆ ಬೋಧಿಸತ್ವ ಹೇಳಿದ 'ಯಾರೂ ಇಲ್ಲದ ಸ್ಥಳವೇ ನನಗೆ ಕಾಣಲಿಲ್ಲ. ಪಶು, ಪಕ್ಷಿ, ಕೀಟಗಳಿದ್ದಾಗ ಯಾರೂ ಇಲ್ಲ ಎಂದು ಕೊಳ್ಳಬಹುದೆ?

ನನಗಂತೂ ಯಾರೂ ಕಾಣದ ಸ್ಥಳವೇ ಕಾಣದು. ಯಾರೂ ಇಲ್ಲದ ಕಡೆ ನಾನಂತೂ ಇರುತ್ತೇನಲ್ಲ?'

ಗುರುಗಳಿಗೆ ಇದನ್ನು ಕೇಳಿ ಸಂತೋಷವಾಯಿತು. ಮಗಳನ್ನು ಕೊಟ್ಟು ಮದುವೆ ಮಾಡಿದರು.

ಈ ಕಥೆ ಹೇಳಿ ಬುದ್ಧ ಹಳೆಯ ಸಂಬಂಧ ಕೂಡಿಸಿದ. 'ಆಗ ಗುರುವಾಗಿದ್ದಾತ ಸಾರಿಪುತ್ರ, ಶಿಷ್ಯ ನಾನೆ ಆಗಿದ್ದೆ' ಎಂದು ಹೇಳಿದ.

* * * *

ಕನ್ನಡ ವಿಶ್ವವಿದ … ವಿ ಮಟ್ಟದವರೆಗೆ ಉತ್ತಮ ಹಾಗೂ ಉಪ … ಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು … ಪಠ್ಯಪುಸ್ತಕ ರಚನೆ ಮಾಡಬೇಕೆಂದು … ಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸು … ಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯ … ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ … ವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾ … ಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮ … ಅನೇಕ ಸಲ ಚರ್ಚಿಸಿ ಯೋಜನೆಯ …

ನವಸಾಕ್ಷರರಿಗ … ಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ … ಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾ … ಮಿಸಿಕೊಂಡು ಅವರಿಗೆ ಕಮ್ಮಟಗಳನ … ದ್ಯಂತ ಆಯ್ದ ಜಿಲ್ಲೆ, ತಾಲೂಕುಗಳ … ತ್ತಿರುವವರಿಂದ ಅದರ ಗುಣದೋಷ … ಲ್ಲ ವಿಶ್ವವಿದ್ಯಾಲಯದ ಗಣಕಯಂತ್ರ … , ಸಹಾಯಕರು ನೀಡಿದ್ದ ಮಾಹಿತಿಗಳನ … ಮಗುಣವಾಗಿ ವಿಷಯದ ಆದ್ಯತೆಗಳನ್ನು … ್ಯತ ಲೇಖಕರು ನಮ್ಮ ವಿಶ್ವವಿದ್ಯಾಲ … ತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು